**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

# ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2022-23 ದಿನಾಂಕ: 19-12-2025**

## ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಆರು ತಿಂಗಳ ಅವಧಿಗೆ ನೇಮಕಾತಿ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 4ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅರಣ್ಯ ಕ್ಷೇತ್ರ ನಿರ್ಧಾರಣೆ ಮಾಡುವ ಕಾರ್ಯಕ್ಕಾಗಿ ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ **ಮೂರು (3) ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗೆ** ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ಕರ್ತವ್ಯಗಳನ್ನು ನಿರ್ವಹಿಸಲು **ನಿವೃತ್ತರಾದ ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸೇವೆಯನ್ನು [ನಿವೃತ್ತ ಸಹಾಯಕ ಆಯುಕ್ತರು (ಕಂದಾಯ)]** ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಆರು ತಿಂಗಳ ಅವಧಿಗೆ *[ಹುದ್ದೆಯ ಅವಧಿಯನ್ನು ಸರ್ಕಾರದ ಅನುಮತಿಯೊಂದಿಗೆ ವಿಸ್ತರಿಸಬಹುದಾಗಿದೆ]* ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

### 1. ಅರ್ಜಿ ಸಲ್ಲಿಸುವ ವಿಧಾನ:

a. ಅರ್ಜಿ ಮತ್ತು ಅಧಿಸೂಚನೆಯನ್ನು ಕರ್ನಾಟಕ ಅರಣ್ಯ ಇಲಾಖಾ ವೆಬ್‌ಸೈಟ್ **https://aranya.gov.in/**ದ ಮುಖ ಪುಟದ ಕೆಳಭಾಗದಲ್ಲಿ ಇರುವ **"ನೇಮಕಾತಿ"** ಶೀರ್ಷಿಕೆಯಡಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು **ನೋಂದಾಯಿತ ಅಂಚೆ/ಸ್ಪೀಡ್ ಪೋಸ್ಟ್/ಅಧಿಕೃತ ಕೊರಿಯರ್** ಮುಖಾಂತರ **"ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003"** ಎಂದು ವಿಳಾಸಿಸಿ, **"ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ಅರ್ಜಿ"** ಎಂದು ಮುಚ್ಚಿದ ಲಕೋಟೆಯ ನಮೂದಿಸಿ **ದಿನಾಂಕ: 20.12.2025 ರಿಂದ 15.01.2026ರ ಅಪರಾಹ್ನ 5.30 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

*[**ಸೂಚನೆ:** ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಹಾಗೂ ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಮುದ್ದಾಂ/ ಇ-ಮೇಲ್/ ಇತರ ವಿಧಾನದಲ್ಲಿ ಸಲ್ಲಿಸುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.]*

b. ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಸೂಚನೆ ಹಾಗೂ ಷರತ್ತುಗಳನ್ನು ಕೂಲಂಕಷವಾಗಿ ಓದಿ, ಸಮರ್ಪಕವಾಗಿ ಅರ್ಥೈಸಿಕೊಂಡು ತಮಗೆ ಅನ್ವಯವಾಗುವ ವಿವರಗಳನ್ನು ಭರ್ತಿ ಮಾಡತಕ್ಕದ್ದು.

c. ಅರ್ಜಿದಾರರು ಸಹಾಯಕ ಆಯುಕ್ತರು (ಕಂದಾಯ ಇಲಾಖೆ) ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಕುರಿತು ಸೇವಾ ವಿವರಗಳ ಮಾಹಿತಿ ಹಾಗೂ ವಯೋಮಿತಿಯ ಕುರಿತು ಅಧಿಕೃತ ದಾಖಲೆಯ ಸ್ವಯಂ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.

2. **ವೇತನ:** ಗುತ್ತಿಗೆ ಆಧಾರದಲ್ಲಿ ನೇಮಕವಾದ ಅರಣ್ಯ ವ್ಯವಸ್ಥಾಪನಾಧಿಕಾರಿಗೆ ಮಾಸಿಕ ವೇತನ ರೂ. 60,000/-ಗಳನ್ನು ನಿಗದಿಪಡಿಸಲಾಗಿದೆ ಹಾಗೂ ಸದರಿ ಹುದ್ದೆಗೆ ನೇಮಕಗೊಂಡ ಅರಣ್ಯ ವ್ಯವಸ್ಥಾಪನಾಧಿಕಾರಿಗೆ ಒಂದು ವಾಹನವನ್ನು ಹೊರಗುತ್ತಿಗೆ ಆಧಾರ ಅಥವಾ ಬಾಡಿಗೆ ಆಧಾರದ ಮೇಲೆ ಸಿಆಸುಇ ಇಲಾಖೆಯ ನಿಯಮಗಳನ್ವಯ ಮಾಸಿಕ ರೂ. 25000/- ಮಿತಿಯೊಳಗೆ ಒದಗಿಸಲಾಗುವುದು.

3. **ಹುದ್ದೆಗಳ ವಿವರ:**

| ಕ್ರ. ಸಂ. | ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನ | ಕಾರ್ಯವ್ಯಾಪ್ತಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಾಗರ | ಸಾಗರ | 1 ಹುದ್ದೆ [ತಾತ್ಕಾಲಿಕ] |
| 2 | ಮಂಡ್ಯ | ಮಂಡ್ಯ, ಪಾಂಡವಪುರ, ರಾಮನಗರ | 1 ಹುದ್ದೆ [ತಾತ್ಕಾಲಿಕ] |
| 3 | ಕಲಬುರಗಿ | ಕಲಬುರಗಿ, ಸೇಡಂ, ಬೀದರ್, ಬಸವಕಲ್ಯಾಣ | 1 ಹುದ್ದೆ [ತಾತ್ಕಾಲಿಕ] |

4. **ಅರ್ಹತೆ:**

ಅರ್ಜಿದಾರರು ಸಹಾಯಕ ಆಯುಕ್ತರು (ಕಂದಾಯ ಇಲಾಖೆ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ವಯೋ ನಿವೃತ್ತರಾಗಿರಬೇಕು ಹಾಗೂ ಈ ಕೆಳಕಂಡ ವಿಷಯಗಳ ಕುರಿತು ಪರಿಣಿತ / ಅನುಭವವುಳ್ಳವರಾಗಿರಬೇಕು. ***[ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಯ ಕರ್ತವ್ಯದ ಸಂಕ್ಷಿಪ್ತ ವಿವರವನ್ನು ಅನುಬಂಧದಲ್ಲಿ ತಿಳಿಸಿದೆ.]***

a) ಅರಣ್ಯ ಮೋಜಣಿ ಹಾಗೂ ಗಡಿರೇಖೆ ಗುರುತಿಸುವಿಕೆ ಮತ್ತು ನಕಾಶೆ ತಯಾರಿಕೆ ಅನುಭವ.
b) ಭೂ ವಿವಾದಗಳ ಕುರಿತಂತೆ ಸಿವಿಲ್ ನ್ಯಾಯಾಲಯದಂತೆ ಕರ್ತವ್ಯ ನಿರ್ವಹಣೆ ಅನುಭವ.
c) Theodolite Survey ಮತ್ತು GPS Survey ಕುರಿತಂತೆ ಪರಿಣಿತ / ಅನುಭವ.

ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನದ ಜಿಲ್ಲಾ ವ್ಯಾಪ್ತಿಯ ಅರ್ಜಿದಾರರಿಗೆ ಮೊದಲ ಆದ್ಯತೆಯನ್ನು ನೀಡಲಾಗುವುದು.

5. **ವಯೋಮಿತಿ:**

ಅರ್ಜಿಯನ್ನು ಆಹ್ವಾನಿಸಿ ಜಾರಿ ಮಾಡಲಾಗಿರುವ ಈ ಅಧಿಸೂಚನೆಯ ದಿನಾಂಕಕ್ಕೆ ಅರ್ಜಿದಾರರು 70 ವರ್ಷ ವಯಸ್ಸನ್ನು ಮೀರಿರಬಾರದು.

6. **ಆಯ್ಕೆ ವಿಧಾನ:** ಸಂದರ್ಶನ ಪರೀಕ್ಷೆ

Digitally signed by
Meenakshi Negi
Date: 19-12-2025
18:05:35

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 19.12.2025
ಸ್ಥಳ: ಬೆಂಗಳೂರು

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

# ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2022-23 ದಿನಾಂಕ: 19-12-2025**

**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಆರು ತಿಂಗಳ ಅವಧಿಗೆ ನೇಮಕಾತಿ**

## ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗೆ ಅರ್ಜಿ

ಕನ್ನಡ ಅಥವಾ ಆಂಗ್ಲ ಭಾಷೆಯ ಸ್ಪಷ್ಟ ಅಕ್ಷರಗಳಲ್ಲಿ ಭರ್ತಿ ಮಾಡಿ
Fill legibly in English (Capital) or Kannada letter only

ಯಾವುದೇ ಅರ್ಜಿ ಶುಲ್ಕ ಇರುವುದಿಲ್ಲ.
There is no Application Fee.

ಇತ್ತೀಚಿನ ಪಾಸ್ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ

Affix recent Passport size Photograph

1. ಅಭ್ಯರ್ಥಿಯ ಹೆಸರು
   Name of the Candidate

2. ಲಿಂಗ / Sex — ಪುರುಷ Male ☐ ಮಹಿಳೆ Female ☐

3. ಜನ್ಮ ದಿನಾಂಕ / Date of Birth — ದಿನ / Day ☐☐ ತಿಂಗಳು / Month ☐☐ ವರ್ಷ / Year ☐☐☐☐

(ಅರ್ಜಿಯನ್ನು ಆಹ್ವಾನಿಸಿ ಜಾರಿ ಮಾಡಲಾಗಿರುವ ಈ ಅಧಿಸೂಚನೆಯ ದಿನಾಂಕಕ್ಕೆ ಅರ್ಜಿದಾರರು 70 ವರ್ಷ ವಯಸ್ಸನ್ನು ಮೀರಿರಬಾರದು)

4. ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ ಹಾಗೂ ಮೊಬೈಲ್ ಸಂಖ್ಯೆ
   Address for correspondence and Mobile Number

5. ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನ
   (ಅಧಿಸೂಚನೆಯ ಕ್ರ.ಸಂ. (3)ರಲ್ಲಿ ನಮೂದಿಸಿದೆ)

6. ಸೇವಾ ವಿವರದ ಕುರಿತು ಮಾಹಿತಿ
   [ಅರ್ಜಿದಾರರು ಸಹಾಯಕ ಆಯುಕ್ತರು (ಕಂದಾಯ ಇಲಾಖೆ) ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಕುರಿತು ಸೇವಾ ವಿವರಗಳು ಮಾಹಿತಿ ಹಾಗೂ ವಯೋಮಿತಿಯ ಕುರಿತು ಅಧಿಕೃತ ದಾಖಲೆಗಳ ವಿವರ ನಮೂದಿಸುವುದು.]

ಮೇಲಿನ ಮಾಹಿತಿಗಳು ಸತ್ಯವಾಗಿದೆ ಎಂದು ಪ್ರಮಾಣ ಮಾಡುತ್ತೇನೆ.

Place / ಸ್ಥಳ:
Date / ದಿನಾಂಕ:

ಅರ್ಜಿದಾರರ ಸಹಿ
Signature of the Applicant

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

## ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2022-23, ದಿನಾಂಕ: 19-12-2025**

**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಆರು ತಿಂಗಳ ಅವಧಿಗೆ ನೇಮಕಾತಿ**

## ಅನುಬಂಧ

**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಯ ಕರ್ತವ್ಯದ ಸಂಕ್ಷಿಪ್ತ ವಿವರ**

1. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 4 ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅಧಿಸೂಚಿಸಿದ ಭೂ ಪ್ರದೇಶದ ಭೂ ಮಾಪನಾ ಮಾಡುವುದು, ಗಡಿರೇಖೆ ಗುರುತಿಸುವುದು ಮತ್ತು ಅದರ ಭೂಪಟವನ್ನು ತಯಾರಿಸುವ ಕುರಿತು ಕ್ರಮ ಕೈಗೊಳ್ಳುವುದು.
2. ದಾವೆಗಳ/ ಪ್ರಕರಣಗಳ ಅಧಿವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯದಂತೆ ವಿಚಾರಣೆ ನಡೆಸಿ, ಪ್ರಕರಣವನ್ನು ಇತ್ಯರ್ಥಗೊಳಿಸುವುದು.
3. ಸರ್ಕಾರವು ಸ್ವಾಧೀನತೆಯ ಹಕ್ಕನ್ನು ಕಲಂ – 3 ರಂತೆ ಹೊಂದಿರುವ ಪ್ರದೇಶಕ್ಕೆ ರಾಜ್ಯ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 4 ರಡಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಕಲಂ 4(1)(ಸಿ) ರಂತೆ ಸದರಿ ಪ್ರದೇಶದ ಹಕ್ಕು ಬಾಧ್ಯತೆಗಳನ್ನು ಅಥವಾ ಯಾವುದೇ ಖಾಸಗಿ ವ್ಯಕ್ತಿಯ ಹಕ್ಕನ್ನು, ಅರಣ್ಯ ಉತ್ಪನ್ನದ ಹಕ್ಕನ್ನು ಮತ್ತು ಮೀಸಲು ಅರಣ್ಯ ರಚನೆಯ ವಿಚಾರವಾಗಿ ಅರಣ್ಯ ಕಾಯ್ದೆ ಮತ್ತು ನಿಯಮಗಳಲ್ಲಿ ವಿವರಿಸಿರುವಂತೆ ಕಾನೂನಿನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಕಾರ್ಯ ನಿರ್ವಹಿಸುವುದು.
4. ಅರಣ್ಯ ವ್ಯವಸ್ಥಾಪನಾಧಿಕಾರಿಯವರು ಭೂ ಸ್ವಾಧೀನ ಕಾಯ್ದೆ ಹಾಗೂ ರಾಜ್ಯದ ವಿವಿಧ ಭೂ ಸ್ವಾಧೀನ ಕಾಯ್ದೆಗಳಡಿಯಲ್ಲಿ (ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮಗಳು 1969, ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972 ಹಾಗೂ ನಿಯಮಗಳು, ಕರ್ನಾಟಕ ಅರಣ್ಯ ಕೈಪಿಡಿ 1976, ಅರಣ್ಯ (ಸಂರಕ್ಷಣಾ) ಕಾಯ್ದೆ 1980 ಹಾಗೂ ನಿಯಮಗಳಲ್ಲಿ ಪ್ರದತ್ತವಾದ ಶಾಸನಬದ್ಧ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.
5. ಪ್ರಸ್ತುತ ಈಗಾಗಲೇ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 4 ರಡಿ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳು ಕಳೆದ 2 – 3 ದಶಕಗಳಿಂದ ಅರಣ್ಯ ವ್ಯವಸ್ಥಾಪನಾ ಪ್ರಕ್ರಿಯೆಗೆ ಒಳಪಟ್ಟು, ಕಲಂ 17ರಡಿ ಅಂತಿಮವಾಗಿ ಅಧಿಸೂಚನೆಯಾಗದೆ ರಾಜ್ಯ ವ್ಯಾಪಿ ಬಾಕಿ ಉಳಿದಿರುವ ಪ್ರಕರಣಗಳನ್ನು ನಿಗದಿತ ಕಾಲ ಮಿತಿಯೊಳಗೆ ಇತ್ಯರ್ಥಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಇಲಾಖೆಯು ಈ ಬಗ್ಗೆ ಕಾಲ ಕಾಲಕ್ಕೆ ನಿಗದಿಪಡಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

Digitally signed by
Meenakshi Negi
Date: 19-12-2025
18:04:17

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 19.12.2025
ಸ್ಥಳ: ಬೆಂಗಳೂರು

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

# ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2022-23 ದಿನಾಂಕ: 19-12-2025**

**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಟ ಆರು ತಿಂಗಳ ಅವಧಿಗೆ ನೇಮಕಾತಿ**

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ **ಮೂರು (3) ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗೆ** ನಿವೃತ್ತರಾದ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳ ಸೇವೆಯನ್ನು [ನಿವೃತ್ತ ಸಹಾಯಕ ಆಯುಕ್ತರು (ಕಂದಾಯ)] ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಟ ಆರು ತಿಂಗಳ ಅವಧಿಗೆ ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ನೋಂದಾಯಿತ ಅಂಚೆ/ಸ್ಪೀಡ್ ಪೋಸ್ಟ್/ಅಧಿಕೃತ ಕೊರಿಯರ್** ಮುಖಾಂತರ **"ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003"** ಎಂದು ವಿಳಾಸಿಸಿ, "**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ಅರ್ಜಿ"** ಎಂದು ಮುಚ್ಚಿದ ಲಕೋಟೆಯ ನಮೂದಿಸಿ **ದಿನಾಂಕ: 19.12.2025 ರಿಂದ 10.12.2025ರ ಅಪರಾಹ್ನ 5.30 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಈ ಕುರಿತು ಅರ್ಜಿ ಮತ್ತು ಅಧಿಸೂಚನೆಯನ್ನು ಕರ್ನಾಟಕ ಅರಣ್ಯ ಇಲಾಖಾ ವೆಬ್‌ಸೈಟ್ https://aranya.gov.in/ದ ಮುಖ ಪುಟದ ಕೆಳಭಾಗದಲ್ಲಿ ಇರುವ **"ನೇಮಕಾತಿ"** ಶೀರ್ಷಿಕೆಯಡಿ ಪ್ರಕಟಿಸಲಾಗಿದೆ.

Digitally signed by
Meenakshi Negi
Date: 19-12-2025
18:03:18

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 19.12.2025
ಸ್ಥಳ: ಬೆಂಗಳೂರು